ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾದೀಶರ ನ್ಯಾಯಾಲಯ ಯಾದಗಿರಿ.
ಸಿ.ಸಿ. ನಂಃ **6282/2023**

ಫಿರ್ಯಾಧಿಕಾರಃ ಕರ್ನಾಟಕ ಸರ್ಕಾರದ ಪರವಾಗಿ ಯಾದಗಿರಿ
ಅಬಕಾರಿ ಪೊಲೀಸ್ ಇಲಾಖೆ

// ವಿರುದ್ಧ //

ಆರೋಪಿತ ಃ ಮಹೇಶಗೌಡ ತಂದೆ ಮಲ್ಲಣ್ಣಗೌಡ ಕಲಾಲ,
ವಃ **21** ವರ್ಷ, ಸಾಃ ಬಾಡಿಯಾಳ ಗ್ರಾಮ,
ತಾಃ ಮತ್ತು ಜಿಃ ಯಾದಗಿರಿ.

ದೋಷಾರೋಪಣೆ

ನಾನು ಶ್ರೀ. ಅರುಣ ಚೌಗುಲೆ ಬಿ.ಎ.,ಎಲ್.ಎಲ್.ಬಿ.,(Honors) ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ.ಗಳು ಯಾದಗಿರಿ, ಈ ಕೆಳಕಂಡ ಆರೋಪಿತರು ಆದ ನಿಮ್ಮ ಮೇಲೆ ಈ ಮೂಲಕ ಕೆಳಕಂಡಂತೆ ದೋಷಾರೋಪಣೆಗೆ ಗುರಿಪಡಿಸುತ್ತೇನೆ.

ದಿನಾಂಕಃ 01.03.2023 ರಂದು ಸಂಜೆ 05.30 ಗಂಟೆ ಸುಮಾರಿಗೆ ಅಬಕಾರಿ ಉಪ-ನೀರಿಕ್ಷಕರು ಖಚಿತ ಮಾಹಿತಿ ಮೇರೆಗೆ ತಮ್ಮ ಸಿಬ್ಬಂದಿಯಾಂದಿಗೆ ಯಾದಗಿರಿ ತಾಲೂಕಿನ ಬಾಡಿಯಾಳ ಗ್ರಾಮದ ಆರೋಪಿತನಾದ ನಿಮ್ಮ ಮನೆಯ ಮೇಲೆ ದಾಳಿ ಮಾಡಿದಾಗ ನೀವು ಮನೆಯಲ್ಲಿ 200 ಲೀ. ಸಾಮಾರ್ಥ್ಯದ 1 ಪ್ಲಾಸ್ಟಿಕ್ ಬ್ಯಾರಲ್ ನಲ್ಲಿ 100 ಲೀ. ಮತ್ತು 30 ಲೀ. ಸಾಮಾರ್ಥ್ಯದ 1 ಬೊಗೋಣಿಯಲ್ಲಿ 20 ಲೀ ಒಟ್ಟು 120 ಲೀ. ಕಲಬೆರಕೆ ಸೇಂದಿಯನ್ನು ಅಕ್ರಮವಾಗಿ ಮಾರಾಟದ ಉದ್ದೇಶದಿಂದ ಸಂಗ್ರಹಸಿಟ್ಟಿದ್ದು ಕಂಡುಬಂದಿದ್ದು, ಈ ಮೂಲಕ ಆರೋಪಿತನಾದ ನೀವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32(1) ಮತ್ತು 38(ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುವಿರಿ.

ಆರೋಪಿಯ ಹೇಳಿಕೆ

ಪ್ರಶ್ನೆ-1ಃ ಮೇಲೆ ಓದಿ ಹೇಳಿದ ಆಪಾದನೆ/ದೋಷಾರೋಪಣೆ ತಿಳಿಯಿತೆ ಅಥವಾ ಅರ್ಥವಾಯಿತೇ?

ಉತ್ತರಃ ತಿಳಿಯಿತು.

ಪ್ರಶ್ನೆ-2ಃ ನೀವು ತಪ್ಪೊಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗ ಬಯಸುವಿರಾ?

ಉತ್ತರಃ ವಿಚಾರಣೆಯಾಗಬೇಕು.

(ಮೇಲ್ಕಾಣಿಸಿದ ದೋಷಾರೋಪಣೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ಇಂದು ದಿನಾಂಕಃ 09.02.2026 ರಂದು ತೆರೆದ ನ್ಯಾಯಾಲಯದಲ್ಲಿ ದೋಷಾರೋಪಣೆಯನ್ನು ಆರೋಪಿಗೆ ಓದಿ ಹೇಳಲಾಯಿತು.)

ದಿನಾಂಕಃ 09.02.2026

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು, ಯಾದಗಿರಿ.